# ಇಂಗ್ಲಿಷ್ ಹಂಗು: ನವಾಜುದ್ದೀನ್ ಟೀಕೆ



■ ವಿಶಾಖ ಎನ್.

ನವಾಜುದ್ದೀನ್ ಸಿದ್ದಿಕಿ ಕಡ್ಡಿ ಮುರಿದಂತೆ ಮಾತನಾಡುವವರ ಪೈಕಿ. ಅವರು ಹಿಂದಿಯಲ್ಲಷ್ಟೆ ಅಲ್ಲದೆ ದಕ್ಷಿಣ ಭಾರತದ ಸಿನಿಮಾಗಳಲ್ಲೂ ಅಭಿನಯಿಸಿದವರು. ರಜನೀಕಾಂತ್ ಅವರಂಥ ಸೂಪರ್‌ಸ್ಟಾರ್ ಜತೆಗೂ ನಟಿಸಿ, ಅನುಭವ ವಿಸ್ತರಿಸಿಕೊಂಡ ಅವರು ಮುಕ್ತ ಮನಸ್ಸಿನಿಂದಲೇ ಫಿಲ್ಟರ್ ಇಲ್ಲದೆ ತೋಚಿದ್ದನ್ನು ಹೇಳುತ್ತಿರುತ್ತಾರೆ.

'ಹಿಂದಿ ರಾಷ್ಟ್ರ ಭಾಷೆ ಅಲ್ಲದಿದ್ದರೆ ನಿಮ್ಮ ಭಾಷೆಯ ಸಿನಿಮಾಗಳನ್ನು ಏಕೆ ಆ ಭಾಷೆಗೆ ಡಬ್ ಮಾಡುತ್ತೀರಿ' ಎಂಬರ್ಥದಲ್ಲಿ ಅದೇ ಭಾಷೆಯಲ್ಲಿ ನಟ ಅಜಯ್ ದೇವಗನ್ ಮಾಡಿದ ಟ್ವೀಟ್‌ಗೆ ಕಿಚ್ಚ ಸುದೀಪ್ ಮಾಂಜಾ ಕೊಟ್ಟಿದ್ದನ್ನು ಕಂಡಿದ್ದೇವೆ. ನವಾಜುದ್ದೀನ್ ಕೂಡ ಹಿಂದಿ ಸಿನಿಮಾ ನಿರ್ದೇಶಕರನ್ನೇ ನೇರವಾಗಿ ತರಾಟೆಗೆ ತೆಗೆದುಕೊಂಡರು. ಸೆಟ್‌ಗಳಲ್ಲಿ ಅವರು ಇಂಗ್ಲಿಷ್‌ನಲ್ಲೇ ಮಾತನಾಡುವುದರ ಬಗೆಗೆ ಅವರ ತಕರಾರು. 'ನಿರ್ದೇಶಕ ಎಂದೊಬ್ಬ ಇರುತ್ತಾನೆ. ಅವನು ಎಲ್ಲವನ್ನೂ ಹೇಳುವುದು ಇಂಗ್ಲಿಷ್‌ನಲ್ಲೇ. ಹಳ್ಳಿಗಾಡಿನಿಂದ ರಂಗಭೂಮಿಯಲ್ಲಿ ಕಲಿತು ಬಂದ ಎಷ್ಟೋ ನಟ–ನಟಿಯರಿಗೆ ಅವರು ಏನು ಹೇಳುತ್ತಿದ್ದಾರೆ ಎಂದೇ ತಿಳಿಯದು. ಮೇಲೆ–ಕೆಳಗೆ ನೋಡಿಕೊಂಡು ಹೀಗೆ ಇರಬೇಕು ಎಂದು ಅರ್ಥ ಮಾಡಿಕೊಳ್ಳಬೇಕಷ್ಟೆ. ಸಹಾಯಕ ನಿರ್ದೇಶಕರೆನ್ನಿಸಿಕೊಂಡವರು ತಂತಮ್ಮ ಪಾಯಸ ಮಾಡಿಕೊಳ್ಳುವುದರಲ್ಲೇ ನಿರತರಾಗಿರುತ್ತಾರೆ' ಎಂದು ನವಾಜುದ್ದೀನ್ ನೇರವಾಗಿ ಟೀಕಿಸಿದ್ದಾರೆ.

ತಮಿಳುನಾಡಿನಲ್ಲಿ ಚಿತ್ರೀಕರಣ ನಡೆಯುವಾಗ ಸಂಭಾಷಣೆಯನ್ನು ಹೇಳಿಕೊಡುವವರಷ್ಟೇ ಅಲ್ಲದೆ ಎಲ್ಲ ತಂತ್ರಜ್ಞರು, ನಟ–ನಟಿಯರು ಅದೇ ಭಾಷೆಯಲ್ಲಿ ಮಾತನಾಡುತ್ತಾರೆ. ಭಾಷೆ ಗೊತ್ತಿಲ್ಲದವರಿಗೂ ಅದರ ಸಾರಾಂಶವನ್ನು ಮನಮುಟ್ಟುವಂತೆ ಹೇಳುತ್ತಾರೆ. ಕನ್ನಡದಲ್ಲಿ ಅಲ್ಲಿನ ಭಾಷೆಯನ್ನೇ ಪ್ರೀತಿಸಿ, ಮಾತನಾಡುತ್ತಾರೆ. ದಕ್ಷಿಣ ಭಾರತದ ಸಿನಿಮಾಗಳಲ್ಲಿ ಇರುವ ಈ ಭಾಷಾಪ್ರೀತಿ ಹಿಂದಿ ನಿರ್ದೇಶಕರಲ್ಲಿ ನಾಸ್ತಿ ಎನ್ನುವುದು ನವಾಜುದ್ದೀನ್ ಸ್ವಾನುಭವ.

ಬಹಳ ಕಷ್ಟಪಟ್ಟು ಹಿಂದಿ ಚಿತ್ರಗಳ ನಟನಾಗಿ ನೆಲೆ ಕಂಡುಕೊಂಡಿರುವ ನವಾಜುದ್ದೀನ್ ಖುದ್ದು ಇಂಗ್ಲಿಷ್ ಮಾತನಾಡಲು ಒಂದು ಕಾಲದಲ್ಲಿ ಹೆಣಗಾಡಿದ್ದವರು. ಹೀಗಾಗಿ ಅವರಿಗೆ ಚಿತ್ರೀಕರಣದ ಸಂದರ್ಭದಲ್ಲಿ ಆಗುವ ಗೊಂದಲಗಳ ಅನುಭವ ಇದೆ. ಇನ್ನು ಹಿಂದಿಯಲ್ಲೂ ದೊಡ್ಡ ಸದ್ದು ಮಾಡುತ್ತಿರುವ ದಕ್ಷಿಣ ಭಾರತದ ಸಿನಿಮಾಗಳನ್ನು ತಾವು ನೋಡಿಲ್ಲ, ನೋಡುವುದೂ ಇಲ್ಲ ಎಂದೂ ನವಾಜುದ್ದೀನ್ ಹೇಳಿದ್ದನ್ನು ಕೆಲವರು ಟ್ರೋಲ್ ಮಾಡಿದ್ದಾರೆ. ■



## ಟೈಗರ್‌ಗೆ ಹಾಲಿವುಡ್ ಕನಸು

ಟೈಗರ್ ಶ್ರಾಫ್ ಚಿಣ್ಣರ ಪಾಲಿನ ಚೆನ್ನ. ಮಕ್ಕಳು ಅವರ ನೃತ್ಯ ಹಾಗೂ ಸಾಹಸದ ದೃಶ್ಯಗಳನ್ನು ಆಸ್ವಾದಿಸುತ್ತಾರೆ. 'ಹೀರೊಪಂತಿ 2' ಸಿನಿಮಾ ತೆರೆಕಂಡ ಸಂದರ್ಭದಲ್ಲೇ ಅವರು ತಮ್ಮ ಬಾಲ್ಯದ ಕನಸೊಂದನ್ನು ಹಂಚಿಕೊಂಡರು. ಬಾಲಿವುಡ್‌ನಲ್ಲಿ ಅವರು ಸೂಪರ್‌ಸ್ಟಾರ್ ಆಗಬೇಕು ಎಂದೇನೂ ಅಂದುಕೊಂಡಿಲ್ಲ. ಬದಲಿಗೆ, ಹಾಲಿವುಡ್‌ನಲ್ಲಿ ಅಭಿನಯಿಸಬೇಕು ಎನ್ನುವುದು ಅವರ ದೀರ್ಘ ಕಾಲದ ಕನಸು.

ಹಾಲಿವುಡ್‌ನಲ್ಲಿ ತಮ್ಮ ದೈಹಿಕ ಚಟುವಟಿಕೆ ಹಾಗೂ ಸಾಹಸ ದೃಶ್ಯಗಳನ್ನು ನಿರ್ವಹಿಸುವ ಸಾಮರ್ಥ್ಯಕ್ಕೆ ತಕ್ಕ ಪಾತ್ರಗಳು ಸಾಕಷ್ಟಿವೆ. ತಮ್ಮ ವಯೋಮಾನದವರು ಅಂಥವನ್ನೆಲ್ಲ ಮಾಡುವುದು ಕೂಡ ಅಲ್ಲಿ ವಿರಳ. ಹೀಗಾಗಿ ಅವಕಾಶದ ಕಿಟಕಿಗಳ ಕಡೆಗೆ ನೋಡುತ್ತಿರುವುದಾಗಿ ಅವರು ಹೇಳಿದರು.

ಟೈಗರ್ ಹೀಗೆ ಸುಖಾಸುಮ್ಮನೆ ಹೇಳಿದ್ದಲ್ಲ. ಅವರು ಎರಡು ಮೂರು ಸಲ ಆಡಿಷನ್‌ಗೆ ಹೋಗಿ ಹಾಲಿವುಡ್ ಅವಕಾಶದ ಕದ ತಟ್ಟಿ ಬಂದವರು. ಆಗ ಆಯ್ಕೆಯಾಗಿರಲಿಲ್ಲ. ಅದಕ್ಕೆ ಕಾರಣ ಏನು ಎನ್ನುವುದನ್ನೂ ಅವರು ಕಂಡುಕೊಂಡಿದ್ದಾರಂತೆ. ಮುಂದೆ ಬಾಕಿ ಉಳಿದಿರುವ ಕನಸನ್ನು ನನಸು ಮಾಡಿಕೊಳ್ಳುವ ಮಹತ್ವಾಕಾಂಕ್ಷೆ ಅವರದ್ದು. ಮೂವತ್ತೆರಡನೇ ವಯಸ್ಸಿನಲ್ಲಿಯೂ ಹಾಲಿವುಡ್ ಚಿತ್ರಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಕನಸನ್ನು ನೇವರಿಸುತ್ತಿರುವ ಅವರನ್ನು ತಂದೆ ಜಾಕಿ ಶ್ರಾಫ್ ಈಗಲೂ 'ಸಣ್ಣವನು' ಎಂದೇ ಪ್ರೀತಿಯಿಂದ ಕರೆಯುತ್ತಾರೆ.